(ಇಂದು ದಿನಾಂಕಃ 05–11–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀಸವಾಲು ಃ ಶ್ರೀ ವಿ ಪಿ ಪಿ ವಕೀಲರಿಂದ ಃ -

1) ನಾನು ಅಣ್ಣಿಗೇರಿಯ ನಿವಾಸಿ. ರೈತಾಪಿ ಹಾಗೂ ಕೂಲಿಕೆಲಸ ಮಾಡುತ್ತೇನೆ. ನನಗೆ ಸೇರಿದ ಹೊಲ ಮನೆ ಇರುವುದಿಲ್ಲ. 1 ನೇ ಪ್ರತಿವಾದಿಯ ಹೊಲದಲ್ಲಿ ಕೆಲಸ ಮಾಡುತ್ತಾನೆ. 1 ನೇ ಪ್ರತಿವಾದಿಯ ತಂದೆ ಹೆಸರು ಗೊತ್ತಿಲ್ಲ, ತಾಯಿ ಅಡಿವೆವ್ವ. 1 ನೇ ಪ್ರತಿವಾದಿಯ ತಂದೆ ತಾಯಿ ಜೀವಿತ ಇದ್ದ ಬಗ್ಗೆ ಗೊತ್ತಿಲ್ಲ.

2) ಸಾಕ್ಷ್ಯ ನುಡಿಯಲು ನನಗೆ ಯಾವುದೇ ಸಮನ್ಸ ಬಂದಿರುವುದಿಲ್ಲ. ವಾದಿ ಹಾಗೂ ಪ್ರತಿವಾದಿಯರು ಯಾರು ಎಂದು ಗೊತ್ತಿಲ್ಲ. ದಾವಾ ಆಸ್ತಿಯ ಬಗ್ಗೆ ಮಾಹಿತಿ ಇರುತ್ತದೆ ಅದು 5 ಎಕ್ರೆ 30 ಗುಂಟೆ ಅದರ ಸರ್ವೆ ಸಂಖ್ಯೆ 349 ಇರುತ್ತದೆ. ಸದರಿ ವಿಷಯಗಳನ್ನು ನಾನು ಕಲ್ಪನೆ ಮಾಡಿಕೊಂಡು ಸುಳ್ಳು ನುಡಿಯುತ್ತಿದ್ದೇನೆ ಅಂದರೆಸರಿಯಲ್ಲ.

3) ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಕೀಲರು ತಯಾರಿಸಿದ ನಂತರ ಸಹಿ ಮಾಡಲು ಹೇಳಿದ್ದು ಮಾಡಿರುತ್ತೇನೆ ಎಂದರೆ ಸರಿ. ಅದರಲ್ಲಿ ಬರೆದ ವಿಷಯ ನನಗೆ ಗೊತ್ತಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿಗೆ ಕುಟುಂಬದಲ್ಲಿ ಅವರಿಗೆ ಸೇರಿಸಿ ಎರಡೂ ಗಂಡು ಮಕ್ಕಳು ಹಾಗೂ ಒಂದೇ ಹೆಣ್ಣುಮಗಳು ಇರುತ್ತಾರೆ. ಅವರ ಹೆಸರು ಗೊತ್ತಿಲ್ಲ. ನಿಂಗಪ್ಪನು ಅಣ್ಣಿಗೇರಿಯಲ್ಲಿ ಹೊಟೇಲ್ ಕೆಲಸ ಮಾಡುತ್ತಾನೆ. ನನ್ನ ಸಂಗಡ ಕೆಲಸ ಮಾಡುವುದಿಲ್ಲ. ನಾನು ಮಾರುಕಟ್ಟೆಗೆ ಹೋದಾಗ ಆತನನ್ನು ನೋಡುತ್ತೇನೆ. ನಿಂಗಪ್ಪನನ್ನು 1 ನೇ ಪ್ರತಿವಾದಿಯು ಮನೆಯಿಂದ ಹೊರಹಾಕಿ ಆತನು ನವಲಗುಂದದ ಬಸ್ಸನಿಲ್ದಾಣದಲ್ಲಿ ಕೆಲಸ ಮಾಡುತ್ತಿದ್ದಾನೆ ಅಂದರೆ ಸರಿಯಲ್ಲ. ನನಗೆ ನವಲಗುಂದದ ಬಸ್ಸ ನಿಲ್ದಾಣದಲ್ಲಿ ಬೇಟಿಯಾಗುತ್ತಾನೆ ಅಂದರೆ ಸರಿಯಲ್ಲ.

4) ನಾನು 1 ನೇ ಪ್ರತಿವಾದಿಯ ಹೊಲದಲ್ಲಿ ಕೆಲಸ ಮಾಡುತ್ತಿದ್ದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನನಗೆ ಆರ್ಥಿಕ ಸಹಾಯ ಮಾಡುತ್ತಾನೆ ಎಂದರೆ ಸರಿ. ನನಗೆ ವಾದಿ ಹಾಗೂ ಪ್ರತಿವಾದಿಯರ ಮನೆತನದ ಬಗ್ಗೆ ಹಾಗೂ ಅವರ ವ್ಯವಹಾರದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರು ಸಹ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯು ವಾದಿ ಹಾಗೂ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ.

ಮರು ವಿಚಾರಣೆ ಃ ಇಲ್ಲ.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**